ಇ) ಅಂಗನವಾಡಿ ಕೇಂದ್ರದಲ್ಲಿ 20 ವರ್ಷಕ್ಕಿಂತ ಹೆಚ್ಚಿಗೆ ಸೇವೆ ಮಾಡುತ್ತಿರುವವರಿಗೂ ಹಾಗೂ ಪ್ರಸಕ್ತ ಸೇವೆಗೆ ಸೇರುವ ಸಹಾಯಕಿಯರಿಗೂ ಒಂದೇ ರೀತಿಯ ಸಂಭಾವನೆ ಇದ್ದು ಈ ತಾರತಮ್ಯ ಹೋಗಲಾಡಿಸಲು ಯಾವ ಕ್ರಮ ಕೈಗೊಂಡಿದೆ;

ಈ) ಅಂಗನವಾಡಿ ಕೇಂದ್ರದ ಸಹಾಯಕಿಯರಿಗೆ ಸಂಭಾವನೆಯು ಪ್ರತೀ ತಿಂಗಳೂ ತಪ್ಪದೆ ಪಾವತಿಯಾಗುತ್ತಿಲ್ಲದಿರುವುದುರಿಂದ ಬಾಕಿ ಇರುವ ಹಲವು ತಿಂಗಳ ಸಂಭಾವನೆಯ ಪಾವತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀಮತಿ ಭಾಗೀರಥಿ ಮರಳ ಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಆದೇಶವನ್ನು ರದ್ದುಗೊಳಿಸಿರುವುದಿಲ್ಲ. ಕಳೆದ ಒಂದು ವರ್ಷದಿಂದ ಪಡಿತರ ವ್ಯವಸ್ಥೆಯಡಿ ಅಂಗನವಾಡಿ ಕೇಂದ್ರಗಳಿಗೆ ಸೀಮೆ ಎಣ್ಣೆ ಕೊಡುವುದನ್ನು ನಿಲ್ಲಿಸಿರುತ್ತಾರೆ.

ಆ) ಪ್ರತೀ ತಿಂಗಳು ಪ್ರತಿ ಅಂಗನವಾಡಿ ಕೇಂದ್ರಕ್ಕೆ ರೂ.100–00 ಉರುವಲು ವೆಚ್ಚವಾಗಿ ನೀಡಲಾಗುತ್ತಿದೆ.

ಇ) ಅಂಗನವಾಡಿ ಕಾರ್ಯಕರ್ತೆಯರಾಗಿ 5 ವರ್ಷ ಸೇವೆ ಸಲ್ಲಿಸಿರುವವರಿಗೆ ರೂ. 31ಗಳನ್ನು ಹೆಚ್ಚುವರಿಯಾಗಿ ನೀಡಲಾಗುತ್ತಿದೆ. 10 ವರ್ಷ ಸೇವೆ ಸಲ್ಲಿಸಿದವರಿಗೆ ಇನ್ನೂ ರೂ. 31 ಗಳನ್ನು ಹೆಚ್ಚುವರಿಯಾಗಿ ನೀಡಲಾಗುತ್ತಿದೆ.

ಈ) ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಲ್ಲಿ ತಡವಾದ ಸಂದರ್ಭಗಳಲ್ಲಿ ಮಾತ್ರ ಅಂಗನವಡಿ ಕಾರ್ಯಕರ್ತೆಯರಿಗೆ ಗೌರವಧನ ಪಾವತಿ ಮಾಡುವಲ್ಲಿ ವಿಳಂಬವಾಗಿದೆ. ಕೇಂದ್ರ ಸರ್ಕಾರದ ಹಣ ಸ್ವೀಕೃತವಾದ ನಂತರ ಬಾಕಿ ಇರುವ ಗೌರವಧನವನ್ನು ಪಾವತಿ ಮಾಡಲಾಗಿದೆ.

639(166) ಶ್ರೀ ಸುನೀಲ್ ಕುಮಾರ್ (ಕಾರ್ಕಳ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 31–3–2004ಕ್ಕೆ ಇರುವ ಸಂಘಗಳ ಸಂಖ್ಯೆ ಎಷ್ಟು;

ಆ) ರಾಜ್ಯದಲ್ಲಿ 31–3–2004ಕ್ಕೆ ಸಹಕಾರ ಚಳುವಳಿಯ ಪ್ರಾರಂಭದಿಂದ ಸಮಾಪನ (ಲಿಕ್ವಿಡೇಶನ್) ಆದ ಸಹಕಾರ ಸಂಘಗಳ ಸಂಖ್ಯೆ ಎಷ್ಟು;

ಇ) ಕಳೆದ ಮೂರು ವರ್ಷಗಳಲ್ಲಿ ಲಾಭ ಹಾಗೂ ಹಾನಿಯಲ್ಲಿದ್ದ ಸಂಘಗಳ ಸಂಖ್ಯೆ ಎಷ್ಟು;

ಈ) ಕಳೆದ ಮೂರು ವರ್ಷಗಳಲ್ಲಿ ಅಡಿಟ್ ಆಗಿರುವ ಹಾಗೂ ಆಡಿಟ್ ಆಗದೇ ಇರುವ ಸಂಘಗಳ ಸಂಖ್ಯೆ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ 31-3-2004ಕ್ಕೆ ಒಟ್ಟು 32804 ಸಹಕಾರ ಸಂಘಗಳು ಇರುತ್ತವೆ.

ಆ) ರಾಜ್ಯದಲ್ಲಿ 31-3-2004ಕ್ಕೆ 3029 ಸಹಕಾರ ಸಂಘಗಳು ಸಮಾಪನೆಯಾಗಿರುತ್ತವೆ.

ಇ) ಕಳೆದ 3 ವರ್ಷಗಳಲ್ಲಿ ಲಾಭ ಹಾಗೂ ಹಾನಿಯಲ್ಲಿದ್ದ ಸಂಘಗಳ ಸಂಖ್ಯೆ ಕೆಳಗಿನಂತಿವೆ:

ವರ್ಷ	ಸಂಘಗಳ ಸಂಖ್ಯೆ	
	ಲಾಭ	ನಷ್ಟ
2001-02	17734	13128
2002-03	18646	13262
2003-04	19142	13662

ಈ) ಕಳೆದ 3 ವರ್ಷಗಳಲ್ಲಿ ಅಡಿಟ್ ಆಗಿರುವ ಹಾಗೂ ಆಗದೇ ಇರುವ ಸಹಕಾರ ಸಂಘಗಳ ವಿವರ ಈ ಕೆಳಕಂಡಂತೆ ಇರುತ್ತವೆ.

ವರ್ಷ	ಅಡಿಟ್ ಆಗಿರುವ ಸಂಘಗಳ ಸಂ.	ಅಡಿಟ್ ಆಗದೇ ಇರುವ ಸಂಘಗಳ ಸಂ
2001-02	17993	12433
2002-03	20115	11091
2003-04	22411	9466

640(171) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಾದ್ಯಂತ ತಾಲ್ಲೂಕುವಾರು ಇರುವ ವಿವಿಧ ಉದ್ದೇಶಗಳ ಕಸಬುದಾರ ಸಹಕಾರ ಸಂಘಗಳು ಎಷ್ಟು;

ಆ) ಈ ತಾಲ್ಲೂಕು ಮಟ್ಟದ ಸಹಕಾರ ಕಸಬುದಾರ ಸಂಘಗಳಿಗೆ ಸರಕಾರ ನೀಡಿರುವ ಶೇರು ಹಣವೆಷ್ಟು;

ಇ) ಈ ಸಂಘಗಳಿಗೆ ರಾಜ್ಯ ಖಾದಿ ಮಂಡಳಿಯವರು ನೀಡಿರುವ ಧನ ಸಹಾಯವೆಷ್ಟು;

ಈ) ಈ ಸಂಘಗಳ ಪೈಕಿ ಎಷ್ಟು ಸಂಘಗಳು ಚಾಲ್ತಿಯಲ್ಲಿವೆ ಹಾಗೂ ಎಷ್ಟು ಸಂಘಗಳು ಸ್ಥಗಿತಗೊಂಡಿವೆ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) 176.